ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/03/ಇಸಿಎಸ್(1)/2025

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು-560001
ದಿನಾಂಕ: 04.04.2025

## ಜ್ಞಾಪನ

ವಿಷಯ: 2024-25ನೇ ಶೈಕ್ಷಣಿಕ ಸಾಲಿನ ಡಿಪ್ಲೋಮ ಸೆಮಿಸ್ಟರ್ ಏಪ್ರಿಲ್/ಮೇ 2025ರ ಪರೀಕ್ಷೆಗೆ ಸಂಬಂಧಿಸಿದಂತೆ ಆಂತರಿಕ ಅಂಕಗಳನ್ನು ಪರಿಶೀಲಿಸಲು ಪರಿವೀಕ್ಷಕರನ್ನು ನೇಮಿಸುವ ಕುರಿತು.

ಉಲ್ಲೇಖ: 1) ಈ ಕಛೇರಿ ಜ್ಞಾಪನ ಸಂಖ್ಯೆ: ಬಿಟಿಇ 03/ಇಸಿಎಸ್(1)/2025 ದಿ:02.04.2025
2) ತಾಂ.ಪ.ಮಂಡಳಿಯ 153ನೇ ಕೇಂದ್ರೀಯ ಸಭೆಯ ನಿರ್ಣಯ 153.2.11
3) ಸರ್ಕಾರಿ ಆದೇಶ ಸಂಖ್ಯೆ:ಇಡಿ 57 ಟಿಪಿಇ 2013 ದಿನಾಂಕ:17.4.2015

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2024-25ನೇ ಶೈಕ್ಷಣಿಕ ಸಾಲಿನ ಏಪ್ರಿಲ್/ಮೇ 2025ರ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಗೆ ಸಂಬಂಧಿಸಿದಂತೆ ಆಂತರಿಕ ಅಂಕಗಳನ್ನು ಹಾಗೂ ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಲು "ಆಂತರಿಕ ಅಂಕಗಳ ಪರಿವೀಕ್ಷಕರು" ಗಳನ್ನು ನೇಮಿಸಲಾಗಿದೆ. ಆಂತರಿಕ ಅಂಕಗಳ ಪರಿವೀಕ್ಷಕರುಗಳ ನೇಮಕಾತಿ ಮಾಹಿತಿ BTELinx ವೆಬ್ ಪೋರ್ಟಲ್‌ನಲ್ಲಿ ಲಭ್ಯವಿರುತ್ತದೆ.

ಆಂತರಿಕ ಅಂಕಗಳ ಪರಿವೀಕ್ಷಕರಿಗೆ, ಸಂಸ್ಥೆಯ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಪ್ರತಿ ವಿಷಯದ Blue Books ಗಳು, ಆಂತರಿಕ ಅಂಕಗಳ ವಹಿ, BTELinx ಪೋರ್ಟಲ್‌ನಲ್ಲಿ ಪ್ರಾಂಶುಪಾಲರು ಆಂತರಿಕ ಅಂಕಗಳನ್ನು ಅಪ್‌ಲೋಡ್ ಮಾಡಿ ನಂತರ ಪೋರ್ಟಲ್ ನಿಂದ ಡೌನಲೋಡ್ ಮಾಡಿದ (ವಿದ್ಯಾರ್ಥಿಗಳು ಸಹಮತಿಸಿದ) ಮುದ್ರಿತ ಪ್ರತಿ ಮತ್ತು ಚೆಕ್ ಲಿಸ್ಟ್‌ನಲ್ಲಿ ತಿಳಿಸಿರುವ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ನಿಗದಿತ ನಮೂನೆಗಳಲ್ಲಿ ಒದಗಿಸುವುದು.

ಪರಿವೀಕ್ಷಕರುಗಳು ಉಲ್ಲೇಖ (1)ರ ಜ್ಞಾಪನದಲ್ಲಿನ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿ ಮೂಲ ಆಂತರಿಕ ಅಂಕಗಳ ವಹಿಯಲ್ಲಿನ ಅಂಕಗಳನ್ನು ಸಂಬಂಧಪಟ್ಟ BlueBooks/Records/ಇತರೆ ದಾಖಲೆಗಳೊಂದಿಗೆ ಪರಿಶೀಲಿಸಿ ದೃಢೀಕರಿಸುವುದು. ನಂತರ ವಹಿಯೊಡನೆ BTELinx ಪೋರ್ಟಲ್ ನಿಂದ ಡೌನ್ ಲೋಡ್ ಮಾಡಿದ ಮುದ್ರಿತ ಪ್ರತಿಯಲ್ಲಿನ ಅಂಕಗಳನ್ನು ಪರಿಶೀಲಿಸಿ ಜೊತೆಗೆ BTELinx ಪೋರ್ಟಲ್ Online ನಲ್ಲಿ ಆಂತರಿಕ ಅಂಕಗಳನ್ನು ಮೂಲ ಆಂತರಿಕ ವಹಿಯಲ್ಲಿನ ದೃಢೀಕೃತ ಅಂಕಗಳೊಂದಿಗೆ ಕೂಡ ಪರಿಶೀಲಿಸುವುದು ಹಾಗೂ ವ್ಯತ್ಯಾಸ ಇದ್ದಲ್ಲಿ ನಿಯಮಾನುಸಾರ ಕ್ರಮವಹಿಸಲು ಸೂಚಿಸಲಾಗಿದೆ.

**ಆಂತರಿಕ ಅಂಕಗಳ ಪರಿವೀಕ್ಷಕರು ಸಂಸ್ಥೆಯ ಮೂಲ ಆಂತರಿಕ ಅಂಕಗಳ ವಹಿಯಲ್ಲಿ ಏಪ್ರಿಲ್/ಮೇ 2025ರ ಪರೀಕ್ಷೆಗೆ ಸಂಬಂಧಪಟ್ಟ ಎಲ್ಲಾ ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ಪರಿಶೀಲಿಸಿ ಎಲ್ಲಾ ಪುಟಗಳಲ್ಲಿಯೂ ಸಂಬಂಧಪಟ್ಟ ಉಪನ್ಯಾಸಕರು/ವಿಭಾಗಾಧಿಕಾರಿ/ಪ್ರಾಂಶುಪಾಲರು ದೃಢೀಕರಿಸಿರುವುದನ್ನು ಖಾತರಿಪಡಿಸಿಕೊಂಡು ಪರಿವೀಕ್ಷಕರು ಎಲ್ಲಾ ಪುಟಗಳ ಲ್ಲಿಯೂ ಪೂರ್ಣ ಸಹಿ ಮಾಡತಕ್ಕದ್ದು.**

ಆಂತರಿಕ ಅಂಕಗಳ ವಹಿಯಲ್ಲಿ ಪರಿವೀಕ್ಷಕರು ಪರಿಶೀಲನೆ ವೇಳೆ ಯಾವುದಾದರೂ ಅಂಕಗಳನ್ನು ತಿದ್ದುಪಡಿ ಮಾಡಿದಲ್ಲಿ ಅವುಗಳನ್ನು ಕಿರುಸಹಿಯೊಂದಿಗೆ ದೃಢೀಕರಿಸುವುದು ಹಾಗೂ ಬಿಟಿಇಲಿಂಕ್ಸ್ ಆನ್‌ಲೈನ್‌ನಲ್ಲಿ ಕೂಡ ಸಂಬಂಧಪಟ್ಟವರನ್ನು ಸಂಪರ್ಕಿಸಿ ತಿದ್ದುಪಡಿಗಳನ್ನು ಇಂದೀಕರಿಸುವುದು. ಪ್ರತಿ ಪುಟದಲ್ಲಿಯೂ ತಿದ್ದುಪಡಿಗಳ ಸಂಖ್ಯೆಯನ್ನು ನಮೂದಿಸಿ ದೃಢೀಕರಿಸುವುದು ಕಡ್ಡಾಯ ಎಂದು ತಿಳಿಸಲಾಗಿದೆ.

**ಆಂತರಿಕ ಅಂಕಗಳ ಪರೀಕ್ಷೆ (CIE) ಗಳಲ್ಲಿ ಶೇ.40 ಕ್ಕಿಂತ ಕಡಿಮೆ ಅಂಕಗಳನ್ನು ಪಡೆದಿರುವ ಎಲ್ಲಾ ವಿದ್ಯಾರ್ಥಿಗಳ ಬ್ಲೂ ಬುಕ್ಸ್/ರೆಕಾರ್ಡ್ಸ್/ಚಟುವಟಿಕೆಗಳ ದಾಖಲೆಗಳನ್ನು ಕಡ್ಡಾಯವಾಗಿ ಪರಿಶೀಲಿಸಿ, ಸದರಿ ವಿದ್ಯಾರ್ಥಿಗಳು ಪಡೆದಿರುವ ಅಂಕಗಳನ್ನು ಆಂತರಿಕ ಅಂಕಗಳ ವಹಿಯಲ್ಲಿ ಸರಿಯಾಗಿ ನಮೂದಿಸಿರುವುದನ್ನು ಖಾತರಿಪಡಿಸಿಕೊಳ್ಳಲು ಆಂತರಿಕ ಅಂಕಗಳ ಪರಿವೀಕ್ಷಕರುಗಳಿಗೆ ಸೂಚಿಸಲಾಗಿದೆ.** ಮುಂದುವರೆದು ಸೆಮಿಸ್ಟರ್‌ವಾರು ಆಂತರಿಕ ಅಂಕಗಳ ವಹಿಯ ಕೊನೆಯ ಪುಟದಲ್ಲಿ ಶೇ.40 ಕ್ಕಿಂತ ಕಡಿಮೆ ಆಂತರಿಕ ಅಂಕಗಳನ್ನು (CIE) ಪಡೆದ ವಿದ್ಯಾರ್ಥಿಗಳ ವಿವರಗಳನ್ನು ಪಟ್ಟಿಮಾಡಿ, ಅಂತಹ ವಿದ್ಯಾರ್ಥಿಗಳು ಯಾವ ವಿಷಯದಲ್ಲಿ ಏಪ್ರಿಲ್/ಮೇ 2025ರ ಅಂತಿಮ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅರ್ಹರಿರುವುದಿಲ್ಲ ಎಂದು ನಮೂದಿಸಿ ಪ್ರಿನ್ಸಿಪಾಲರು ಮತ್ತು ಆಂತರಿಕ ಅಂಕಗಳ ಪರಿವೀಕ್ಷಕರುಗಳು ಕೆಳಕಂಡಂತೆ ದೃಢೀಕರಿಸಲು ಸೂಚಿಸಲಾಗಿದೆ. ಈ ವಿಷಯದಲ್ಲಿ ಸಂಸ್ಥೆಯ ಪ್ರಾಂಶುಪಾಲರು ವೈಯಕ್ತಿಕ ಗಮನ ಹರಿಸುವುದು.

**ದೃಢೀಕರಣ:** ಆಂತರಿಕ ಅಂಕಗಳನ್ನು ಬ್ಲೂ ಬುಕ್ಸ್/ರೆಕಾರ್ಡ್ಸ್ ಮತ್ತು ಕ್ರೋಢೀಕೃತ ಹಾಜರಾತಿ ವಹಿಯೊಂದಿಗೆ ತಾಳೆಮಾಡಿ ಪರಿಶೀಲಿಸಲಾಗಿದೆ. ಆಂತರಿಕ ಪರೀಕ್ಷೆಗಳಲ್ಲಿ ಶೇ.40ಕ್ಕಿಂತ ಕಡಿಮೆ ಅಂಕಗಳನ್ನು ಪಡೆದಿರುವ ಎಲ್ಲಾ ವಿದ್ಯಾರ್ಥಿಗಳ ಬ್ಲೂ ಬುಕ್ಸ್/ರೆಕಾರ್ಡ್ಸ್‌ಗಳನ್ನು ಕಡ್ಡಾಯವಾಗಿ ಪರಿಶೀಲಿಸಲಾಗಿದೆ ಹಾಗೂ ವಿದ್ಯಾರ್ಥಿಗಳು ಪಡೆದಿರುವ ಅಂಕಗಳನ್ನು ಆಂತರಿಕ ಅಂಕಗಳ ವಹಿಯಲ್ಲಿ ಸರಿಯಾಗಿ ನಮೂದಿಸಲಾಗಿದೆ. ಸೆಮಿಸ್ಟರ್‌ವಾರು ಆಂತರಿಕ ಅಂಕಗಳ ವಹಿಯ ಕೊನೆಯ ಪುಟದಲ್ಲಿ ವಿಷಯವಾರು ಶೇ.40ಕ್ಕಿಂತ ಕಡಿಮೆ ಅಂಕಗಳನ್ನು ಪಡೆದಿರುವ ಎಲ್ಲಾ ವಿದ್ಯಾರ್ಥಿಗಳ ವಿವರಗಳುಳ್ಳ ಪಟ್ಟಿಯನ್ನು ನಮೂದಿಸಲಾಗಿದೆ. ಆಂತರಿಕ ಅಂಕಗಳ ವಹಿಯ ಪ್ರತಿ ಪುಟದಲ್ಲಿಯೂ ಸಂಬಂಧಪಟ್ಟ ಉಪನ್ಯಾಸಕರು, ವಿಭಾಗಾಧಿಕಾರಿಗಳು ಮತ್ತು ಪ್ರಿನ್ಸಿಪಾಲರು ಸಹಿ ಮಾಡಿ ದೃಢೀಕರಿಸಿರುತ್ತಾರೆ. (   ) ಸಂಖ್ಯೆ ಆಂತರಿಕ ಅಂಕಗಳ ತಿದ್ದುಪಡಿಗಳನ್ನು ಕಿರುಸಹಿಯಿಂದ ದೃಢೀಕರಿಸಲಾಗಿದೆ.

ಪ್ರಿನ್ಸಿಪಾಲರ ಸಹಿ

ಪರಿವೀಕ್ಷಕರ ಸಹಿ
ಮತ್ತು ಪೂರ್ಣ ವಿಳಾಸ (ಸೀಲು)

ಮುಂದುವರೆದು ಉಲ್ಲೇಖ(2) ರ ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯ ನಿರ್ಣಯದಂತೆ, ವಿದ್ಯಾರ್ಥಿಗಳಿಗೆ ಕಿರುಪರೀಕ್ಷೆ ನಡೆಸಿದ Blue Book ಗಳನ್ನು ಮೂರು ವರ್ಷ ಕಾಲಾವಧಿಯವರೆಗೆ ಸಂಗ್ರಹಿಸಿಟ್ಟು ನಂತರ ನಿಯಮಾನುಸಾರ ವಿಲೇ ಮಾಡತಕ್ಕದ್ದು ಮತ್ತು ಆಂತರಿಕ ಅಂಕಗಳ ವಹಿಯನ್ನು (I.A Marks Register) ಖಾಯಂ ದಾಖಲೆಯಾಗಿ ಸಂಗ್ರಹಿಸಿಡತಕ್ಕದ್ದೆಂದು ತಿಳಿಸಲಾಗಿದೆ. ಆಂತರಿಕ ಅಂಕಗಳ ಪರಿವೀಕ್ಷಕರು ಚೆಕ್‌ಲಿಸ್ಟ್ ನಮೂನೆಯನ್ನು ಭರ್ತಿ ಮಾಡಿ ಪ್ರಾಂಶುಪಾಲರು ಮತ್ತು ಪರಿವೀಕ್ಷಕರ ಸಹಿ ನಂತರ ಒಂದು ಪ್ರತಿಯನ್ನು ಸಂಸ್ಥೆಯಲ್ಲಿ ಸಂಗ್ರಹಿಸಿಡುವುದು ಆಂತರಿಕ ಅಂಕಗಳ ಪರಿವೀಕ್ಷಕರು ಚೆಕ್ ಲಿಸ್ಟ್‌ನ ಒಂದು ದೃಢೀಕೃತ ಪ್ರತಿಯನ್ನು ತಮ್ಮಲ್ಲಿ ಇಟ್ಟುಕೊಳ್ಳುವುದು.

ಆಂತರಿಕ ಅಂಕಗಳ ವಿಷಯದಲ್ಲಿ ಯಾವುದೇ ಗೊಂದಲ/ಲೋಪದೋಷಗಳು ಉಂಟಾಗದಂತೆ ಕ್ರಮವಹಿಸಲು ಎಲ್ಲಾ ಪ್ರಿನ್ಸಿಪಾಲರುಗಳಿಗೆ ಸೂಚಿಸಲಾಗಿದೆ. ಇದರಿಂದಾಗುವ ಯಾವುದೇ ಲೋಪ/ ವಿದ್ಯಾರ್ಥಿಗಳಿಗೆ ಉಂಟಾಗುವ ಅನಾನುಕೂಲಗಳಿಗೆ/ ಕಾನೂನಾತ್ಮಕ ಸಮಸ್ಯೆಗಳಿಗೆ ಸಂಬಂಧಪಟ್ಟ ಪ್ರಿನ್ಸಿಪಾಲರುಗಳನ್ನೇ ನೇರ ಹೊಣೆಗಾರರನ್ನಾಗಿಸಿ ಉಲ್ಲೇಖ (3) ರ ಸರ್ಕಾರಿ ಆದೇಶದ ಪ್ರಕಾರ ಕ್ರಮ ಕೈಗೊಳ್ಳಲಾಗುವುದು.

ಕಾರ್ಯದರ್ಶಿ

ಇವರಿಗೆ,

1..ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪ್ರಾಂಶುಪಾಲರುಗಳಿಗೆ.-ಅಗತ್ಯ ಕ್ರಮಕ್ಕಾಗಿ
2.ಆಂತರಿಕ ಅಂಕಗಳ ಪರಿವೀಕ್ಷಕರುಗಳಿಗೆ- ಸಂಬಂಧಪಟ್ಟ ಪ್ರಿನ್ಸಿಪಾಲರುಗಳ ಮುಖಾಂತರ

ಪ್ರತಿ:

1. ಕಂಪ್ಯೂಟರ್ ವಿಭಾಗ – ಬಿಟಿಇ ಲಿಂಕ್ಸ್ ವೆಬ್‌ಪೋರ್ಟಲ್‌ನಲ್ಲಿ ಪ್ರಕಟಿಸಲು
2. ಇ-ಗವರ್ನೆನ್ಸ್ ವಿಭಾಗ –ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
3. ಕಾರ್ಯದರ್ಶಿಯವರ ಆಪ್ತಶಾಖೆ
4. ಪರೀಕ್ಷಾ ವಿಭಾಗದ ಅಧಿಕಾರಿಗಳು/ ಸಿಬ್ಬಂದಿಯವರಿಗೆ
5. ಇಎಫಿ ವಿಭಾಗ